
# ಭಗವದ್ಗೀತೆಯ ಸಾರಸರ್ವಸ್ವ ಮತ್ತು ಅದರ ಮಹತ್ವ

ಮೂಲ ಇಂಗ್ಲಿಷ್: **ಸ್ವಾಮಿ ತ್ಯಾಗೀಶಾನಂದ** ಭಾಷಾಂತರ: **ಸ್ವಾಮಿ ವೀರೇಶಾನಂದ**

ಭಗವಂತನ ವಾಣಿಯನ್ನು ಒಳಗೊಂಡ ವಿಶ್ವಮಾನ್ಯ ಗ್ರಂಥವಾದ ಭಗವದ್ಗೀತೆಯನ್ನು ಕೇವಲ ಒದಿ, ಅಧ್ಯಯನ ಮಾಡಿದರೆ ಮಾತ್ರ ಅದರ ಅಂತರಾರ್ಥವನ್ನು ಗ್ರಹಿಸಲಾಗದು; ಅಲ್ಲಿನ ತತ್ತ್ವಗಳನ್ನು ಜೀವನದಲ್ಲಿ ಆಚರಿಸುವ ಮೂಲಕ ಅದರ ಆಧ್ಯಾತ್ಮಿಕ ಸಂದೇಶವನ್ನು ಗ್ರಹಿಸಬೇಕು ಎಂಬ ಆಶಯ ಈ ಲೇಖನದಲ್ಲಿದೆ. ರಾಮಕೃಷ್ಣ ಮಹಾಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ'ದ ೨೦೧೭ರ ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ ಲೇಖನದ ಅನುವಾದವಿದು. ಲೇಖಕರು ಮಹಾನ್ ಸಾಧಕರೂ, ಅನುಭಾವಿಗಳೂ, ಅಸಾಧಾರಣ ಪಾಂಡಿತ್ಯವನ್ನು ಹೊಂದಿದ ವಿದ್ವಾಂಸರೂ ಆಗಿದ್ದರು. ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಅವರು ಹಲವು ಮಂದಿ ಸಾಧಕರಿಗೆ ಉನ್ನತ ಹಂತದ ಶಾಸ್ತ್ರಾಭ್ಯಾಸವನ್ನು ಮಾಡಿಸುತ್ತಿದ್ದರು. ಈ ಲೇಖನವನ್ನು ಸಂಗ್ರಹಿಸಿಕೊಟ್ಟವರು ಹಿರಿಯ ಸಂನ್ಯಾಸಿಗಳಾದ ಸ್ವಾಮಿ ಸುಖಾತ್ಮಾನಂದಜಿಯವರು. ಅನುವಾದಕರು ಪ್ರಸ್ತುತ 'ಪ್ರಬುದ್ಧ ಭಾರತ'ದ ಸಂಪಾದಕರು; ಹಿಂದೆ 'ವಿವೇಕಪ್ರಭ'ದ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ.



ಭಗವದ್ಗೀತೆಯು ಉಪನಿಷತ್ತುಗಳ ಸಾರವಾಗಿದೆ ಎನ್ನುವುದು ಸಾಮಾನ್ಯವಾಗಿ ಇರುವ ನಂಬಿಕೆ. ಹಾಗೆಯೇ ಗೀತೆಯಲ್ಲಿ ಆಧ್ಯಾತ್ಮಿಕ ಜೀವನದ ಅತ್ಯುತ್ತಮ ವಿವರಣೆಯನ್ನು ನಾವು ಪಡೆದುಕೊಳ್ಳುತ್ತೇವೆ ಎನ್ನುವುದು ಕೂಡ ಸತ್ಯವಾದುದು. ಭಗವದ್ಗೀತೆಯನ್ನು ಅದರ ಓದುಗರು ತಮ್ಮ ತಮ್ಮ ಸಾಮರ್ಥ್ಯ ಮತ್ತು ಆವಶ್ಯಕತೆಗಳಿಗೆ ಅನುಸಾರವಾಗಿ ಅರ್ಥಮಾಡಿಕೊಳ್ಳುತ್ತಾರೆ. ಇದನ್ನು 'ಅಧಿಕಾರ' ಎನ್ನುತ್ತಾರೆ. ಪ್ರತಿಯೊಬ್ಬನೂ ತನ್ನ ಅರಿವಿನ ಬೆಳಕಿನಲ್ಲಿಯೇ ಭಗವದ್ಗೀತೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಗೀತಾಧ್ಯಯನದಿಂದ ಉಂಟಾಗುವ ಆಧ್ಯಾತ್ಮಿಕ ಪ್ರಯೋಜನವು ಇದನ್ನೇ ಆಧರಿಸಿರುತ್ತದೆ. ಹೀಗೆ ಆದಾಗ ಮಾತ್ರ ಓದುಗನು ತನ್ನ ಸ್ವಧರ್ಮವನ್ನು ಅಥವಾ ಕರ್ತವ್ಯವನ್ನು ಸರಿ ಯಾಗಿ ಆಚರಿಸಲು ಸಾಧ್ಯ. ಭಗವದ್ಗೀತೆಗೆ ಹಲವು ಆಚಾರ್ಯರು ಗಳಿಂದ ರಚಿತವಾದ ಭಾಷ್ಯಗಳು ಈಗ ಲಭ್ಯ. ಅವುಗಳು ಭಗವ ದ್ಗೀತೆಯನ್ನು ಹಲವು ಆಯಾಮಗಳಿಂದ ಅರ್ಥಮಾಡಿಕೊಳ್ಳಲು ನಮಗೆ ಸಹಾಯಮಾಡುತ್ತವೆ. ಹಾಗೂ, ನಮ್ಮ ಸ್ವಂತ ಅಧಿಕಾರಕ್ಕೆ (ಸಾಮರ್ಥ್ಯ ಮತ್ತು ಆವಶ್ಯಕತೆ) ಅನುಗುಣವಾಗಿ ಯಾವುದು ಉತ್ತಮವಾದ ಮಾರ್ಗ ಎಂದು

ಆಯ್ಕೆಮಾಡಲು ನಮಗೆ ಒಂದು ಮಹದವಕಾಶವನ್ನು ನೀಡುತ್ತವೆ. ಈಗಿನ ಪೀಳಿಗೆಯಲ್ಲಿ ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಹೊಂದಿರುವ ಮಹಾತ್ಮನು ಈ ವಿಷಯಲ್ಲಿ ಎಲ್ಲರಿಗಿಂತ ಉತ್ತಮವಾದ ಮಾರ್ಗದರ್ಶಕನಾಗು ತ್ತಾನೆ. ಹಿಂದಿನ ಕಾಲದಲ್ಲಿ ಆಚಾರ್ಯರು ತಮ್ಮ ತಮ್ಮ ಪೀಳಿಗೆಯ ಆವಶ್ಯಕತೆಗೆ ಅನುಸಾರವಾಗಿ ಗೀತೆಯ ವ್ಯಾಖ್ಯಾನ ವನ್ನು ಮಾಡಿದ್ದಾರೆ. ಇಂಥ ಕಾರ್ಯವನ್ನೇ ಆಧುನಿಕ ಮಹಾ ತ್ಮರೂ ಇಂದಿನ ಸಮಯದಲ್ಲಿ ಕೈಗೊಳ್ಳುತ್ತಾರೆ.

ಭಗವದ್ಗೀತೆಯ ಪ್ರಮುಖವಾದ ಸಂದೇಶವನ್ನು ಹೇಗೆ ತಾನೇ ನಿರ್ಧರಿಸುವುದು? ಇದಕ್ಕಾಗಿ ಷಡ್ವಿಧ ಲಿಂಗಗಳ ಅಥವಾ ಗುರುತುಗಳ ಸಹಾಯವನ್ನು ನಾವು ಪಡೆದುಕೊಳ್ಳಬೇಕು. ಅವೆಂದರೆ ಉಪಕ್ರಮ (ಆರಂಭ), ಉಪಸಂಹಾರ (ಅಂತ್ಯ), ಅಭ್ಯಾಸ, ಅಪೂರ್ವತೆ, ಫಲ, ಅರ್ಥವಾದ (ಪ್ರಶಂಸೆ) ಮತ್ತು ಉಪಪತ್ತಿ (ತರ್ಕ) . ಈ ಎಲ್ಲ ಲಿಂಗಗಳು, ಅಂದರೆ ಗುರುತುಗಳನ್ನು ಗೀತೆಯನ್ನು ಅರ್ಥ ಮಾಡಿಕೊಳ್ಳಲು ನಾವು ಉಪಯೋಗಿಸಿಕೊಳ್ಳಬೇಕು. ಹಾಗೆ ಮಾಡುವ ಸಮಯದಲ್ಲಿ, ಆಧುನಿಕ ಕಾಲದ ಇಬ್ಬರು ಪರಿಪೂರ್ಣ ಆಧ್ಯಾತ್ಮಿಕ ಚೇತನರಾದ ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರ ಬೋಧನೆಗಳ ಸಾರವನ್ನು ಪೂರ್ಣವಾಗಿ ಒಪ್ಪಿಕೊಳ್ಳುವುದೇ ಅತ್ಯಂತ ಸುರಕ್ಷಿತ ಮಾರ್ಗವಾಗುತ್ತದೆ.

ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರ ಜೀವನ ಮತ್ತು ಬೋಧನೆಗಳಿಂದ ಒಂದಂತೂ ಸ್ಪಷ್ಟವಾಗಿ ತೋರಿಬರುತ್ತದೆ: ಅವರಿಬ್ಬರೂ ಭಗವದ್ಗೀತೆಯು ಎಲ್ಲ ಶಾಸ್ತ್ರಗಳ ಸಾರ ಸರ್ವಸ್ವವಾಗಿದೆ ಎಂದು ಪರಿಗಣಿಸಿದ್ದರು. ಶ್ರೀಕೃಷ್ಣನಂಥ ಆಧ್ಯಾತ್ಮಿಕ ಪುರುಷರ ಸಾಕ್ಷಾತ್ಕಾರದ ಆಧಾರದ ಮೇಲೆ ನಮ್ಮ ಬದುಕನ್ನು ಅಧ್ಯಾತ್ಮಮಯವನ್ನಾಗಿ ನಾವು ಮಾಡಿಕೊಳ್ಳಬೇಕು ಎನ್ನುವುದೇ ಆ ಸಾರಭೂತ ಉಪದೇಶ. ಅವರಿಬ್ಬರ ಆಧ್ಯಾತ್ಮಿಕ ಜೀವಿತದ ಎರಡು ಮೂಲಭೂತ ಅಂಶಗಳೆಂದರೆ **ತ್ಯಾಗ** ಮತ್ತು **ಯೋಗ**. ಇದರಲ್ಲಿ ಮೊದಲನೆಯದು ನೇತ್ಯಾತ್ಮಕವಾದುದು ಮತ್ತು ಎರಡನೆಯದು ಧನಾತ್ಮಕವಾದುದು. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಂತೆ ಇವೆ. ತ್ಯಾಗವಿಲ್ಲದೆ ಯೋಗದ ಸಾಧನೆ ಸಾಧ್ಯವಿಲ್ಲ; ಹಾಗೆಯೇ ಯೋಗವಿಲ್ಲದೆ ತ್ಯಾಗದ ಸಾಧನೆ ಸಾಧ್ಯವಿಲ್ಲ. ಹೀಗಾಗಿಯೇ ಭಗವದ್ಗೀತೆಯ ಈ ಎರಡು ಮೂಲಭೂತ ತತ್ತ್ವಭಾವನೆಗಳಿಗೆ ವಿರುದ್ಧವಾದ ಯಾವುದೇ ವ್ಯಾಖ್ಯಾನವು ಕಂಡುಬಂದರೂ ಅದನ್ನು ನಾವು ಸಾರಾಸಗಟಾಗಿ ತಿರಸ್ಕರಿಸಬೇಕು. ಅಂಥ ವಿವರಣೆಯು ಅದೆಷ್ಟೇ ವಿದ್ವತ್ಪೂರ್ಣವಾಗಿದ್ದರೂ ಪರವಾಗಿಲ್ಲ. ಆದರೂ, ತ್ಯಾಗ ಮತ್ತು ಯೋಗಗಳು ವಿವಿಧ ವ್ಯಕ್ತಿಗಳಲ್ಲಿ ವಿವಿಧ ಪ್ರಮಾಣಗಳಲ್ಲಿ , ವಿವಿಧ ಹಂತಗಳಲ್ಲಿ ಕಂಡುಬರುತ್ತವೆ. ತ್ಯಾಗ ಮತ್ತು ಯೋಗಗಳ ಪರಿಪೂರ್ಣ ಸ್ಥಿತಿಯನ್ನು ನಾವು ಕಾಣುವುದು ಆಧ್ಯಾತ್ಮಿಕ ಸಾಕ್ಷಾತ್ಕಾರದ ಶಿಖರವನ್ನು ತಲುಪಿದ ಮಹಾತ್ಮರಲ್ಲಿ ಮಾತ್ರ. ಸಾಧಕರು ಈ ಸಿದ್ಧಪುರುಷರು ಹಾಕಿಕೊಟ್ಟಿರುವ ಆದರ್ಶವನ್ನು ತಲುಪಲು ಬಹಳ ಪರಿಶ್ರಮವನ್ನು ಪಡಬೇಕು. ಇಲ್ಲಿಯೇ 'ಅಧಿಕಾರ'ದ ಪ್ರಮುಖ ಪಾತ್ರವನ್ನು ನಾವು ಕಾಣುವುದು. ಅಧಿಕಾರವು ಎರಡು ಆವಶ್ಯಕತೆಗಳನ್ನು ಹೊಂದಿದೆ : **ಅರ್ಹಿತ್ವ,** ಅರ್ಹತೆ ಮತ್ತು **ಸಾಮರ್ಥ್ಯ,** ಒಬ್ಬನ ಸಾಮರ್ಥ್ಯ.

ಭಗವದ್ಗೀತೆಯು ಆಧ್ಯಾತ್ಮಿಕ ಜೀವನದ ಎಲ್ಲ ಆಯಾಮಗಳನ್ನೂ ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುತ್ತದೆ. ಪ್ರತಿಯೊಬ್ಬ ವ್ಯಕ್ತಿಯನ್ನೂ ತನ್ನ ನಿರ್ದಿಷ್ಟವಾದ ಸಮಸ್ಯೆಗೆ ಸೂಕ್ತ ಪರಿಹಾರವನ್ನು ತನ್ನಲ್ಲಿ ಕಂಡುಕೊಳ್ಳಲು ಗೀತೆಯು ಆಹ್ವಾನವನ್ನು ನೀಡುತ್ತದೆ. ಗೀತೆಯು **ಯೋಗಶಾಸ್ತ್ರ** ಎಂದು ಹೆಸರಾಗಿದೆ. ಈ ಹೆಸರು, ಗೀತೆಯು ಆಧ್ಯಾತ್ಮಿಕ ಜೀವನದ ಎಲ್ಲ ಆಯಾಮಗಳ ವಿಜ್ಞಾನವಾಗಿದೆ ಎನ್ನುವುದನ್ನು ಸೂಚಿಸುತ್ತದೆ. ಭಗವದ್ಗೀತೆಯ ಸಮಸ್ತ ಆಧ್ಯಾತ್ಮಿಕ ಸಾಧನೆಗಳ ಸಮನ್ವಯಶಾಸ್ತ್ರವಾಗಿದೆ. ಇದು ಸಮಸ್ತ ಮಾನವ ವ್ಯಕ್ತಿತ್ವವನ್ನು ಪರಿಪೂರ್ಣಗೊಳಿಸಲು ಸಹಾಯಕವಾಗುವ ಎಲ್ಲ ರೀತಿಯ ಆಧ್ಯಾತ್ಮಿಕ ಸಾಧನೆಗಳನ್ನೂ ಪ್ರತಿನಿಧಿಸುತ್ತದೆ. ಅಂಥ ಪರಿಪೂರ್ಣತೆಯನ್ನು ನಾವು ಆಧ್ಯಾತ್ಮಿಕ ಸಿದ್ಧಪುರುಷನೊಬ್ಬನಲ್ಲಿ (ಸ್ಥಿತಪ್ರಜ್ಞ) ಕಾಣಬಹುದೆಂದು ಗೀತೆಯು ಪ್ರತಿಪಾದಿಸುತ್ತದೆ. ಈ ಬಗೆಯ ಸಾಕ್ಷಾತ್ಕಾರದ ಉನ್ನತ ಸ್ಥಿತಿಯಲ್ಲಿ ಅಂತರಂಗವು ಬುದ್ಧಿ, ಭಾವನೆ, ಇಚ್ಛಾಶಕ್ತಿ ಮುಂತಾದ ಹತ್ತು ಹಲವು ವಿಧಗಳಲ್ಲಿ ಕಾರ್ಯವೆಸಗುತ್ತದೆ. ಹಾಗೂ ಆಧ್ಯಾತ್ಮಿಕ ಪಥಗಳಾದ ಜ್ಞಾನ, ಭಕ್ತಿ, ಕರ್ಮ, ಧರ್ಮಗಳು ಅಂತಹ ಅಂತ ರಂಗದ ಪರಿಪೂರ್ಣ ಸ್ಥಿತಿಯನ್ನು ತಮ್ಮೆಲ್ಲ ಪ್ರಕಾರಗಳಲ್ಲಿಯೂ ಪ್ರತಿನಿಧಿಸುತ್ತವೆ. ಸಾಧಕನು ಈ ಸಮನ್ವಯ ಪರಿಪೂರ್ಣತೆ ಯನ್ನು ತನ್ನ ಅಧಿಕಾರವೇ ಪ್ರಧಾನವಾಗಿರುವ ಯಾವುದಾದರೂ ಒಂದು ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸಿ ಸಿದ್ಧಿಸಿಕೊಳ್ಳ ಬಹುದು.

ಭಗವದ್ಗೀತೆಯ ಎರಡನೆಯ ಅಧ್ಯಾಯವು ಗೀತೆಯ ಸಾರಾಂಶವನ್ನು ಎರಡು ಭಾಗಗಳಲ್ಲಿ ನಮಗೆ ಬೋಧಿಸುತ್ತದೆ. ಮೊದಲ ಭಾಗವು ಮಾನವ ಜೀವಿಯ ನಿಜಸ್ವಭಾವದ ಕುರಿತಾಗಿದೆ. ಹಾಗೂ ಎರಡನೆಯ ಭಾಗವು ಜೀವನದ ಉದ್ದೇಶವನ್ನು ಚರ್ಚಿಸುತ್ತದೆ. ಮೊದಲ ಭಾಗವು ಮಾನವ ಜೀವಿಯು ಬರಿಯ ದೇಹ ಅಥವಾ ಮನಸ್ಸಲ್ಲ , ಆತನು ಚೈತನ್ಯಸ್ವರೂಪನು ಎಂದು ಪ್ರತಿಪಾದಿಸುತ್ತದೆ. ಎರಡನೆಯ ಭಾಗವು ತಾನು ಚೈತನ್ಯಸ್ವರೂಪನೆಂದು ಕಂಡುಕೊಳ್ಳುವುದೇ ಮಾನವಜೀವಿತದ ಉದ್ದೇಶವೆಂದು ಗುರುತುಮಾಡಿ ತೋರಿಸುತ್ತದೆ. ಇದಕ್ಕಾಗಿ ನಮ್ಮನ್ನು ಕವಿದಿರುವ ಅವಿದ್ಯೆ, ಅದರ ಫಲವಾದ ಅಹಂಕಾರ ಮತ್ತು ಅದರ ತೋರಿಕೆಗಳನ್ನು ಮೆಟ್ಟಿ ನಿಲ್ಲಬೇಕಾದ ಆವಶ್ಯಕತೆಯನ್ನು ಎತ್ತಿತೋರಿಸುತ್ತದೆ. ಇವೇ ತತ್ತ್ವದೃಷ್ಟಿಗೆ ತಡೆಯನ್ನು ಒಡ್ಡಿರುವುದು ಎಂದೂ ಉಪದೇಶಿಸುತ್ತದೆ. ಮೊದಲಭಾಗವು ಹತಾಶನಾಗಿದ್ದ ಅರ್ಜುನನಿಗೆ, ಆತನ ಬುದ್ಧಿಯನ್ನು ಮತ್ತು ಗ್ರಾಹಕ ಶಕ್ತಿಗಳನ್ನು ಉಪ

ಯೋಗಿಸಿಕೊಂಡು ತನ್ನ ನೈಜಸ್ವರೂಪವನ್ನು ಕಂಡುಕೊಳ್ಳುವಂತೆ ಕರೆಯನ್ನು ನೀಡುತ್ತದೆ. ಎರಡನೆಯ ಭಾಗವು ಆ ಆತ್ಮಜ್ಞಾನದ ಬೆಳಕಿನಲ್ಲಿ ಜ್ವಲಂತ ಜೀವನವನ್ನು ನಡೆಸುವಂತೆ ಉತ್ತೇಜಿಸುತ್ತದೆ. ಮೊದಲಭಾಗದ ವಸ್ತುವಿಷಯವು ಆತ್ಮಜ್ಞಾನವಾಗಿದ್ದರೆ, ಎರಡನೆಯ ಭಾಗದ ಪ್ರಮುಖವಿಷಯವು ಬ್ರಹ್ಮಸ್ಥಿತಿ ಅಥವಾ ಸ್ಥಿತಪ್ರಜ್ಞ ಎಂಬ ಪರಿಪೂರ್ಣ ಸ್ಥಿತಿಯೇ ಆಗಿರುತ್ತದೆ. ಮೊದಲ ಭಾಗವು ಬುದ್ಧಿಯ ಮೇಲೆ ಒತ್ತುಕೊಟ್ಟರೆ, ಎರಡನೆಯ ಭಾಗವು ಇಚ್ಛಾಶಕ್ತಿಗೆ ಆದ್ಯತೆಯನ್ನು ನೀಡುತ್ತದೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ, ಇಡೀ ಎರಡನೆಯ ಅಧ್ಯಾಯವು ಸಾಂಖ್ಯ (ಜ್ಞಾನ) ಮತ್ತು ಯೋಗ (ಆಧ್ಯಾತ್ಮಿಕ ಜೀವನ) — ಇವುಗಳನ್ನೇ ಮುಖ್ಯ ವಿಷಯಗಳನ್ನಾಗಿ ಹೊಂದಿದೆ.

ತಾನು ಚೈತನ್ಯಸ್ವರೂಪ ಎಂಬ ಪರಿಜ್ಞಾನದ ಆಧಾರದ ಮೇಲೆ ಆಧ್ಯಾತ್ಮಿಕ ಜೀವನವನ್ನು ನಡೆಸುವುದು ಅಷ್ಟೇನೂ ಸುಲಭವಲ್ಲ. ಅದಕ್ಕಾಗಿ ಆಧ್ಯಾತ್ಮಿಕ ಸಾಧನೆಯನ್ನು ಅತ್ಯಾವಶ್ಯಕವಾಗಿ ಕೈಗೊಳ್ಳಲೇಬೇಕು. ಹಾಗೆಂದೇ, ಮುಂದಿನ ಅಧ್ಯಾಯಗಳೆಲ್ಲವೂ ಹೇಗೆ ಈ ಸಿದ್ಧ ಸ್ಥಿತಿಯನ್ನು ಸ್ವಪ್ರಯತ್ನದ ಮೂಲಕ ಸಾಧಿಸಿಕೊಳ್ಳಬಹುದು ಎಂಬ ವಿಷಯಕ್ಕೇ ಮುಡುಪಾಗಿವೆ. ಹೀಗಾಗಿ ಅಖಂಡ ಭಗವದ್ಗೀತೆಯು ಅಹಂಕಾರವೆಂಬ ಬಂಧನವನ್ನು ಸ್ವಪ್ರಯತ್ನದ ಮೂಲಕ ನಿವಾರಿಸಿಕೊಳ್ಳುವ ವಿಧಾನದ ಉಪದೇಶಗ್ರಂಥವೇ ಆಗಿದೆ ಎಂದು ಹೇಳಬಹುದು. ಈ ಅಹಂಕಾರವು ಅಜ್ಞಾನದ ಫಲವಾಗಿದೆ. ಇದರ ನಿವಾರಣೆಯಿಂದ ಮಾತ್ರ ಬಂಧನಕ್ಕೆ ಸಿಲುಕದೆ, ಅಹಂಕಾರ ಪ್ರೇರಿತವಾಗದೆ ಸ್ವತಂತ್ರವಾಗಿ ಕರ್ಮಗಳನ್ನು ಮಾಡಬಹುದು. ಇದಕ್ಕೆ ಇಚ್ಛಾಶಕ್ತಿ ಆವಶ್ಯಕ. ಕರ್ಮದಲ್ಲಿ ಇಂಥ ಇಚ್ಛಾಶಕ್ತಿಯ ಪಾತ್ರವನ್ನು ಮುಂದಿನ ನಾಲ್ಕು ಅಧ್ಯಾಯಗಳು ಉಪದೇಶಿಸುತ್ತವೆ. ಇನ್ನೂ ಮುಂದಿನ ಆರು ಅಧ್ಯಾಯಗಳು ಭಕ್ತಿಯೋಗ ಎಂದು ಕರೆಯಲಾಗುವ, ನಮ್ಮ ಮನಸ್ಸಿನ ಭಾವನೆಗಳನ್ನು ನಿಯಂತ್ರಣಗೊಳಿಸಲು ಮತ್ತು ನಿರ್ಮಲಗೊಳಿಸಲು ಪರಮಾತ್ಮನಲ್ಲಿ ನಾವು ಬೆಳೆಸಿಕೊಳ್ಳಬೇಕಾದ ಪರಿಶುದ್ಧ ಪ್ರೇಮವನ್ನು ಉಪದೇಶಿಸುತ್ತವೆ. ಭಗವದ್ಗೀತೆಯ ಉಳಿದ ಭಾಗವು ಅಧ್ಯಾತ್ಮಶಾಸ್ತ್ರ ಅಂದರೆ ಬೌದ್ಧಿಕ ಜ್ಞಾನಕ್ಕೆ ಮಹತ್ವ ಕೊಡುವ ಭಾಗವಾಗಿದೆ.

ಜೀವನವೆಂದರೆ ಕರ್ಮಭರಿತವಾದುದು. ಅದಲ್ಲದೆ ಇಡೀ ಜೀವನವು ಸಾಧಾರಣವಾಗಿ ಸ್ವಕೇಂದ್ರಿತವಾಗಿರುತ್ತದೆ. ಅಂತೆಯೇ ತನ್ನನ್ನು ಕಾಪಾಡಿಕೊಳ್ಳುವ ಮತ್ತು ನಿರ್ವಹಣೆ ಮಾಡಿಕೊಳ್ಳುವ ಸಲುವಾಗಿ ನಡೆಸುವ ಸಂಘರ್ಷವಾಗಿ ಸಾಧಾರಣ ಜನರ ಜೀವನವು ಇರುತ್ತದೆ. ಭಗವದ್ಗೀತೆಯ ಮೊದಲ ಭಾಗವು ಉನ್ನತವಾದ ಜೀವನವನ್ನು ನಡೆಸಲು ಬೇಕಾದ ಮಾರ್ಗಸೂಚಿಯನ್ನು ಹಾಕಿಕೊಡುತ್ತದೆ. ಇದಕ್ಕಾಗಿ ನಾವು ನಮ್ಮ ದೈನಂದಿನ ಚಟುವಟಿಕೆಗಳನ್ನು ಸರಿಯಾಗಿ ನಿಯಂತ್ರಿಸಿಕೊಳ್ಳಬೇಕು. ಹೀಗಾಗಿ ಈ ಮೊದಲ ಭಾಗವು ಸಹಜವಾಗಿಯೇ ಕರ್ಮಯೋಗವನ್ನು ಬೋಧಿಸುತ್ತದೆ. ಕರ್ಮಯೋಗದ ಗುರಿ ಸುತ್ತಲಿನ ಪರಿಸರ ಮತ್ತು ಭೌತಿಕ ಐಂದ್ರಿಯ ಜಗತ್ತಿಗೆ ಸಂಬಂಧಿಸಿದ ಹಾಗೆ ನಮ್ಮ ಚಟುವಟಿಕೆಗಳಲ್ಲಿ ಇಚ್ಛಾಶಕ್ತಿಯ ನಿಯಂತ್ರಣವನ್ನು ಅಭ್ಯಾಸ ಮಾಡುವುದೇ ಆಗಿದೆ. ಇದನ್ನು ಮಾಡುವುದು ಹೇಗೆ? ಇದಕ್ಕಾಗಿ ನಾವು ಅನವಶ್ಯಕ ಕಾರ್ಯಗಳನ್ನು ದೂರವಿಡಬೇಕು. ಹಾಗೂ ಆವಶ್ಯಕವಾದ ಕಾರ್ಯವನ್ನು ನಿರಾಸಕ್ತ ಭಾವನೆಯಿಂದ ಮಾಡಬೇಕು. ಯಾವುದು ಆವಶ್ಯಕ ಮತ್ತು ಯಾವುದು ಅನವಶ್ಯಕ ಎನ್ನುವುದನ್ನು ನಿರ್ಧರಿಸುವುದು ನಮ್ಮ ಬಾಳಿನ ಧ್ಯೇಯೋದ್ದೇಶವಾದ ಆಧ್ಯಾತ್ಮಿಕ ಸಾಕ್ಷಾತ್ಕಾರ ಮತ್ತು ಬ್ರಹ್ಮದೃಷ್ಟಿ. ಕರ್ಮಯೋಗದ ಸಾರತತ್ತ್ವವನ್ನು ಎರಡನೆಯ ಅಧ್ಯಾಯ ಮತ್ತು ಮೂರನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನು ಉಪದೇಶಿಸುತ್ತಾನೆ. ಅದೆಂದರೆ ಅಹಂಕಾರವು ತೋರುವ ಸ್ವಾರ್ಥಭಾವನೆಯನ್ನು ಜಯಿಸುವುದು. ಇದೇ ಕರ್ಮಯೋಗವನ್ನು ಬೋಧಿಸುವ ಎಲ್ಲ ನಾಲ್ಕು ಅಧ್ಯಾಯಗಳ ಸಾರಭೂತವಾಗಿದೆ. ಇವುಗಳಲ್ಲಿ ಪ್ರತಿಯೊಂದು ಅಧ್ಯಾಯವೂ, ಕರ್ಮಯೋಗದ ವಿವಿಧ ಅಂಶಗಳನ್ನು ಉಪದೇಶಿಸುತ್ತದೆ.

ಶ್ರೀಕೃಷ್ಣನು ಅರ್ಜುನನ ವ್ಯಾಮೋಹವನ್ನು ಸಾಮರಸ್ಯ ಮತ್ತು ಸಮನ್ವಯಗಳ ದೃಷ್ಟಿಕೋನದಿಂದ ಪರಿಹರಿಸುತ್ತಾನೆ. ಆತನ ಉಪದೇಶವು ಮುಖ್ಯವಾಗಿ ಎರಡು ತತ್ತ್ವಗಳನ್ನು ಆಧರಿಸಿದೆ : ತ್ಯಾಗ ಮತ್ತು ಯೋಗ. ಇದಲ್ಲದೆ ತನ್ನ ಸ್ವಧರ್ಮವನ್ನು ಆಚರಿಸುತ್ತ, ಹೇಗೆ ನೀತಿಯುಕ್ತ ಜೀವನವನ್ನು ನಡೆಸಬಹುದು ಎಂದು ಕೂಡ ಗೀತೆಯು ನಮಗೆ ಹೇಳಿಕೊಡುತ್ತದೆ. ಇಂಥ ಜೀವನವನ್ನು ನಿಸ್ವಾರ್ಥ ಭಾವನೆಯಿಂದ ಜಗತ್ತಿನ ಒಳಿತಿಗಾಗಿ ನಾವು ಬಾಳಬೇಕು. ಆಧ್ಯಾತ್ಮಿಕ ಜೀವನದ ಈ ಎರಡು ಮೂಲಭೂತ ತತ್ತ್ವಗಳನ್ನು ಭಗವದ್ಗೀತೆಯ ಪ್ರತಿಯೊಂದು ಅಧ್ಯಾಯದಲ್ಲಿಯೂ, ಬೇರೆ ಬೇರೆ ಸಂದರ್ಭಗಳಲ್ಲಿ ಮತ್ತು ಬೇರೆ ಬೇರೆ ಹೆಸರುಗಳಲ್ಲಿ ಉಲ್ಲೇಖ ಮಾಡಿ, ಬಹಳ ಮಹತ್ವವನ್ನು ನೀಡಲಾಗಿದೆ. ತ್ಯಾಗ ಮತ್ತು ಯೋಗದ ಭಾವನೆಗಳು ಭಗವದ್ಗೀತೆಯ ಉದ್ದಕ್ಕೂ ಮತ್ತೆ ಮತ್ತೆ ಪುನರಾವರ್ತಿಸಿರುವುದನ್ನು ನಾವು ಕಾಣುತ್ತೇವೆ. ಈ ಎರಡು ಮೂಲ ಆದರ್ಶಗಳೇ ಎಲ್ಲ ಸಾಧಕರ ಆಧ್ಯಾತ್ಮಿಕ ಜೀವನದಲ್ಲಿ ಹಲವು ಹಂತಗಳಲ್ಲಿ , ಬಗೆಬಗೆಯ ರೂಪಗಳನ್ನು ತಾಳುತ್ತವೆ. ಸಾಧಕರಲ್ಲಿ ಕೆಲವರು ಬೌದ್ಧಿಕವಾಗಿ ಮುಂದುವರಿದಿರಬಹುದು; ಮತ್ತೆ ಕೆಲವರು ಪ್ರಧಾನವಾಗಿ ಭಾವಜೀವಿಗಳಾಗಿರಬಹುದು; ಮತ್ತೂ ಕೆಲವರು ಕ್ರಿಯಾಶೀಲರಾಗಿರಬಹುದು. ಈ ಎಲ್ಲ ವಿಧದ ಸಾಧಕರನ್ನೂ ಭಗವದ್ಗೀತೆಯು ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುತ್ತದೆ. ಅದಕ್ಕಾಗಿ ಯೋಗಮಾರ್ಗವನ್ನು ಜ್ಞಾನಯೋಗ, ಭಕ್ತಿಯೋಗ ಮತ್ತು ಕರ್ಮಯೋಗಗಳಾಗಿ ವಿಂಗಡಿಸುತ್ತದೆ. ಆದರೆ ಮನುಷ್ಯರಲ್ಲಿ ಎಲ್ಲರೂ ತಮ್ಮ ಮನಸ್ಸಿನಲ್ಲಿ ಈ ಮೂರೂ ಅಂಶಗಳನ್ನು ಹೊಂದಿರುತ್ತಾರೆ. ಇದಕ್ಕಾಗಿ ಆಧ್ಯಾತ್ಮಿಕ ಸಾಧನೆಗಳನ್ನು ಅವರವರ ಅಧಿಕಾರಕ್ಕೆ ಅನುಗುಣ

ವಾಗಿ, ವಿವಿಧ ಪ್ರಮಾಣಗಳಲ್ಲಿ ಕೈಗೊಳ್ಳಬೇಕಾಗುತ್ತದೆ. ಇದು ಮಾತ್ರವೇ ಸಾಧಕನನ್ನು ಆಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆಸುತ್ತದೆ.

ಪ್ರತಿಯೊಬ್ಬ ವ್ಯಕ್ತಿಯ ಆಧ್ಯಾತ್ಮಿಕ ಸಮಸ್ಯೆಯೂ ಬೌದ್ಧಿಕ, ಭಾವನಾತ್ಮಕ ಮತ್ತು ಕ್ರಿಯಾತ್ಮಕ ಅಂಶಗಳನ್ನು ಹೊಂದಿರುತ್ತದೆ. ಅರ್ಜುನನಿಗೆ ಇದ್ದದ್ದೂ ಹಾಗೆಯೇ. ಅದಕ್ಕೆಂದೇ ಗೀತೆಯ ಪ್ರತಿಯೊಂದು ಅಧ್ಯಾಯದಲ್ಲಿಯೂ ಎಲ್ಲ ಯೋಗಗಳ ಅಂಶಗಳೂ ಅಡಕವಾಗಿರುವುದನ್ನು ನಾವು ಕಾಣಬಹುದು. ಇಡೀ ಭಗವದ್ಗೀತೆಯನ್ನು ಆರು ಅಧ್ಯಾಯಗಳಿರುವ ಮೂರು ಖಂಡಗಳಾಗಿ ವಿಭಜಿಸಬಹುದು. ಮೊದಲ ಆರು ಅಧ್ಯಾಯಗಳು ಕರ್ಮಯೋಗ ಸಾಧನೆಗೆ ಮಹತ್ವವನ್ನು ಕೊಡುತ್ತವೆ; ಪ್ರತಿಯೊಬ್ಬನೂ ಕರ್ಮಫಲದಲ್ಲಿ ಆಸಕ್ತಿಯನ್ನು ತ್ಯಜಿಸಿ, ತನ್ನ ಕರ್ತವ್ಯಗಳನ್ನು ಹೇಗೆ ಮಾಡಬಹುದು ಎಂದು ಅವು ಉಪದೇಶಿಸುತ್ತವೆ. ಏಕೆಂದರೆ ಕರ್ಮಫಲಾಸಕ್ತಿಯು ಸಂಸಾರ ಅಂದರೆ ಜನನ-ಮರಣ ಚಕ್ರಗಳಿಗೆ ಕಾರಣವಾಗುತ್ತದೆ. ಮುಂದಿನ ಆರು ಅಧ್ಯಾಯಗಳು ಭಕ್ತಿಯೋಗವನ್ನು ಮುಖ್ಯವಾಗಿ ಉಪದೇಶಿಸುತ್ತವೆ. ಭಕ್ತಿ ಅಂದರೆ ಭಗವಂತನಲ್ಲಿ ಪ್ರೇಮ. ಅದನ್ನು ಒಂದು ಇಷ್ಟದೇವತೆಯ ಆಲಂಬನದ ಮೂಲಕ ನಾವು ಬೆಳೆಸಿಕೊಳ್ಳಬೇಕು. ಕಡೆಯ ಆರು ಅಧ್ಯಾಯಗಳು ಆಧ್ಯಾತ್ಮಿಕ ಸಾಧನೆಯ ಬೌದ್ಧಿಕ ಆಯಾಮ, ಅಂದರೆ, ಜ್ಞಾನಯೋಗವನ್ನು ಬೋಧಿಸುತ್ತವೆ.

ಒಂಬತ್ತನೆಯ ಅಧ್ಯಾಯವು ಉಪಾಸನೆಯ ಧ್ಯೇಯವಸ್ತುವಾದ ಪರಮಾತ್ಮನ ಸ್ವರೂಪವನ್ನು ವಿಶದವಾಗಿ ಬೋಧಿಸುತ್ತದೆ. ಅಲ್ಲದೆ ಮನಸ್ಸಿನ ಕಾರ್ಯಗಳೆಲ್ಲದರಲ್ಲಿ ಭಕ್ತಿಯೇ ಪ್ರಧಾನವಾದುದು ಎಂದು ಒತ್ತಿಹೇಳುತ್ತದೆ. ೧೦ನೆಯ ಅಧ್ಯಾಯದಲ್ಲಿ ಒಟ್ಟಾರೆ ಸಮನ್ವಯಕ್ಕೇ ಮಹತ್ವವನ್ನು ನೀಡಲಾಗಿದ್ದು, ಭಕ್ತನೂ ಕೂಡ ಜ್ಞಾನವನ್ನು ಪಡೆದುಕೊಳ್ಳುತ್ತಾನೆ ಎಂಬ ಆಶ್ವಾಸನೆಯನ್ನು ನಾವಲ್ಲಿ ಕಾಣುತ್ತೇವೆ. ಸೃಷ್ಟಿಯಲ್ಲಿನ ಎಲ್ಲ ಉದಾತ್ತ ಮತ್ತು ಸುಂದರ ವಸ್ತುಗಳೆಲ್ಲದರಲ್ಲಿಯೂ ಭಗವಂತನ ವೈಭವವನ್ನೇ ಕಾಣಬೇಕು ಎನ್ನುವ ಕರೆಯೊಂದಿಗೆ ಈ ಅಧ್ಯಾಯವು ಕೊನೆಗೊಳ್ಳುತ್ತದೆ. ೧೧ನೆಯ ಅಧ್ಯಾಯದಲ್ಲಿ ಶ್ರೀಕೃಷ್ಣನ ನೈಜ ವಿಶ್ವರೂಪವನ್ನು ಅರ್ಜುನನು ದರ್ಶನ ಮಾಡುತ್ತಾನೆ. ಇದರಿಂದ ಅವನಿಗೆ ತನ್ನ ಭಕ್ತಿಯ ಧ್ಯೇಯವಸ್ತುವಾದ ಪರಮಾತ್ಮನ ನೇರ ದರ್ಶನ ಸಾಧ್ಯವಾಗುತ್ತದೆ. ಇದಲ್ಲದೆ ಈ ಅಧ್ಯಾಯವು ಭಕ್ತಿಯೋಗದ ಸಮನ್ವಯತೆಯ ಸಂದೇಶದೊಡನೆ ಸಮಾಪ್ತಿಗೊಳ್ಳುತ್ತದೆ. ೧೨ನೆಯ ಅಧ್ಯಾಯವು ಕೂಡ ಜ್ಞಾನದ ಅಂಶವನ್ನು ಒಳಗೊಂಡಿದೆ. ಹಾಗೆಂದೇ ಈ ಅಧ್ಯಾಯದ ಕಡೆಯಲ್ಲಿ ಬರುವ ಭಕ್ತನ ಲಕ್ಷಣಗಳಲ್ಲಿ ಭಕ್ತಿಯ ಒಟ್ಟುಗೂಡುವ ಫಲವು ಮನಸ್ಸಿನ ಎಲ್ಲ ಕಾರ್ಯಗಳಲ್ಲಿ (ಬುದ್ಧಿ, ಮನಸ್ಸು , ಭಾವನೆ) ಪ್ರತಿಫಲಿತವಾಗುವುದನ್ನು ನಾವು ನೋಡಬಹುದು.

ಶ್ರೀಕೃಷ್ಣನ ಈ ದಿವ್ಯೋಪದೇಶದಲ್ಲಿ ಕಂಡುಬರುವ ಇನ್ನೊಂದು ಅಂಶವೆಂದರೆ, ಭಕ್ತಿಯೋಗವು ಇಚ್ಛಾಶಕ್ತಿಯ ಕಾರ್ಯಕ್ಕಿಂತ ಭಿನ್ನವಾದುದಲ್ಲ ಎನ್ನುವುದು. ಭಗವದ್ಗೀತೆಯ ಆರನೆಯ ಅಧ್ಯಾಯದಲ್ಲಿ ಧ್ಯಾನಾಭ್ಯಾಸದಲ್ಲಿ ಇಚ್ಛಾಶಕ್ತಿಯ ಆವಶ್ಯಕತೆಯನ್ನು ಶ್ರೀಕೃಷ್ಣನು ಉಪದೇಶಿಸುತ್ತಾನೆ. ಹಾಗೆಯೇ ಕಟ್ಟಕಡೆಯ ಆರು ಅಧ್ಯಾಯಗಳು ಜ್ಞಾನಯೋಗವನ್ನೇ ಪ್ರಮುಖ ಅಂಶವನ್ನಾಗಿ ಹೊಂದಿವೆ. ಆದರೆ ಭಕ್ತಿ ಮತ್ತು ಕರ್ಮಗಳೂ ಅವುಗಳಲ್ಲಿ ಸ್ವಲ್ಪ ಮಟ್ಟಿಗೆ ಬೋಧಿಸಲ್ಪಟ್ಟಿವೆ. ೧೩ನೆಯ ಅಧ್ಯಾಯದಲ್ಲಿ ಜ್ಞಾನಿಯ ಲಕ್ಷಣಗಳನ್ನು ಕೃಷ್ಣನು ಉಪದೇಶಿಸುತ್ತಾನೆ. ಅದರಲ್ಲಿ ಜ್ಞಾನ, ಭಕ್ತಿ, ಕರ್ಮ — ಈ ಮೂರೂ ಯೋಗವಿಧಾನಗಳು ಮಿಲಿತವಾಗಿರುವುದನ್ನು ನಾವು ಕಾಣಬಹುದು. ಈ ಸಮನ್ವಯವು ತನ್ನ ಚರಮಸೀಮೆಯನ್ನು ತಲುಪುವುದು ಕಟ್ಟಕಡೆಯ ಅಧ್ಯಾಯವಾದ ೧೮ನೆಯ ಅಧ್ಯಾಯದಲ್ಲಿ. ಅಲ್ಲಿನ ಕಡೆಯ ಶ್ಲೋಕಗಳಲ್ಲಿ ಜ್ಞಾನಯೋಗದ ಜೊತೆಗೆ ತ್ಯಾಗ ಮತ್ತು ಭಕ್ತಿಯ ಅಪೂರ್ವ ಸಮನ್ವಯವನ್ನು ಸಾಧಿಸಿ ತೋರಿಸಲಾಗಿದೆ.

ಈ ರೀತಿಯಲ್ಲಿ , ಭಗವದ್ಗೀತೆಯ ಹಲವಾರು ಅಧ್ಯಾಯಗಳನ್ನು ನಾವು ಅಧ್ಯಯನ ಮಾಡಿದಾಗ, ಅವುಗಳಲ್ಲೆಲ್ಲ ತ್ಯಾಗ ಮತ್ತು ಯೋಗಗಳ ಪರಿಪೂರ್ಣ ಸಮನ್ವಯವನ್ನು ಕಾಣುತ್ತೇವೆ. ಇದರ ಜೊತೆಗೆ ಆಯಾ ಅಧ್ಯಾಯಗಳ ನಿರ್ದಿಷ್ಟ ವಿಷಯದ ಉಪದೇಶವೂ ಇರುತ್ತದೆ. ಭಗವದ್ಗೀತೆಯ ಸಮಗ್ರ ಉಪದೇಶವನ್ನು ಅರ್ಥಮಾಡಿಕೊಳ್ಳಲು ಹಲವು ಅಂಶಗಳನ್ನು ನಾವು ಅವಲಂಬಿಸಬೇಕಾಗುತ್ತದೆ. ಅವುಗಳಲ್ಲಿ ಕೆಲವು ಹೀಗಿವೆ: ೧. ನೇರವಾಗಿ ಬಾಹ್ಯ ಆಕರಗಳ ಉಲ್ಲೇಖಗಳಿಲ್ಲದ ಭಗವದ್ಗೀತೆಯ ಪಠ್ಯ. ೨. ನಿರ್ದಿಷ್ಟವಾದ ಗುರುವಿನ ಜೀವನ, ಶಿಷ್ಯರು ಮತ್ತು ಪ್ರಸಂಗಗಳ ಮೂಲಕ ಗೀತೆಯ ಅಧ್ಯಯನ ೩. ಮಹಾಭಾರತದ ಇತರ ಭಾಗಗಳು ಮತ್ತು ಪುರಾಣಗಳಲ್ಲಿ ಉಲ್ಲೇಖವಾಗಿರುವ ವ್ಯಾಸನ ಉಪದೇಶಗಳ ಮೂಲಕ ಭಗವದ್ಗೀತೆಯನ್ನು ಅರ್ಥಮಾಡಿಕೊಳ್ಳುವುದು. ೪. ಶ್ರುತಿಗಳಾದ ವೇದೋಪನಿಷತ್ತುಗಳಿಗೆ ಸರಿಹೊಂದುವ ಉಪದೇಶವನ್ನೇ ಗೀತೆಯು ಹೊಂದಿದೆ ಎಂಬ ಭಾವನೆಯಿಂದ ಇದನ್ನು ಅಧ್ಯಯನ ಮಾಡುವುದು. ೫. ನಮ್ಮ ಸ್ವಂತ ಆಧ್ಯಾತ್ಮಿಕ, ನೈತಿಕ ಮತ್ತು ಸಾಮಾಜಿಕ ಅನುಭವಗಳ ಆಧಾರದ ಮೇಲೆ ಭಗವದ್ಗೀತೆಯನ್ನು ಅಧ್ಯಯನ ಮಾಡುವುದು ೬. ನಮ್ಮ ವೈಯಕ್ತಿಕ ಆವಶ್ಯಕತೆಗಳು ಮತ್ತು ಸಾಮರ್ಥ್ಯಗಳ ಪ್ರಕಾರ ಗೀತೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಪಡುವುದು. ೭. ಒಂದು ನಿರ್ದಿಷ್ಟ ತತ್ತ್ವಶಾಸ್ತ್ರದ ಶಾಖೆಗೆ ನಿಷ್ಠರಾಗಿದ್ದುಕೊಂಡು ಭಗವದ್ಗೀತೆಯನ್ನು ಅಧ್ಯಯನ ಮಾಡುವುದು. ೮. ಒಬ್ಬನು ಬದುಕಿರುವ ಕಾಲ ಮತ್ತು ದೇಶವನ್ನು ಗಣನೆಗೆ ತೆಗೆದುಕೊಂಡು ಗೀತೆಯನ್ನು ಅಧ್ಯಯನ ಮಾಡುವುದು.

ಭಗವದ್ಗೀತೆಯ ಉಪದೇಶಗಳು ಆರಂಭವಾಗುವುದು ಕರ್ಮಯೋಗದ ಉಪದೇಶದ ಮೂಲಕ. ಈ ಯೋಗದಲ್ಲಿ ಕೃಷ್ಣನು

ಎಲ್ಲ ಬಾಹ್ಯ ಚಟುವಟಿಕೆಗಳನ್ನೂ ನಿಸ್ವಾರ್ಥ ಯಜ್ಞಭಾವನೆಯಿಂದ ಮಾಡುವುದನ್ನು ಉಪದೇಶ ಮಾಡುತ್ತಾನೆ. ಇದು ಸಂಪೂರ್ಣ ಸ್ವ-ನಿಯಂತ್ರಣಕ್ಕೆ ಮೊದಲ ಸೋಪಾನವಾಗಿದೆ. ಗೀತೆಯ ಇನ್ನೊಂದು ಭಾಗವು ಆಂತರಿಕ ಸಂಘರ್ಷಗಳನ್ನು ಮತ್ತು ಆಚರಣೆಗಳನ್ನು ಪರಿಪೂರ್ಣವಾಗಿ ಆಧ್ಯಾತ್ಮೀಕರಿಸುವ ವಿಧಾನವನ್ನು ಉಪದೇಶ ಮಾಡುತ್ತದೆ. ಇದನ್ನು ಮಾಡಲು ಆ ಎಲ್ಲ ಚಟುವಟಿಕೆಗಳ ನೈಜ ಉದ್ದೇಶವನ್ನು ನಾವು ಸರಿಯಾಗಿ ಅರಿತುಕೊಳ್ಳಬೇಕು. ಹಾಗೆಯೇ ವಿಶ್ವವ್ಯವಸ್ಥೆಯಲ್ಲಿ ಅವುಗಳ ಸ್ಥಾನದ ಅರಿವು ನಮಗಿರಬೇಕು ಮತ್ತು ಅವುಗಳೆಲ್ಲದರ ಮೂಲ ಧ್ಯೇಯವು ಮನೋನಿಯಂತ್ರಣ ಮತ್ತು ಆತ್ಮಸಾಕ್ಷಾತ್ಕಾರ ಎಂಬ ತಿಳಿವಳಿಕೆಯೂ ನಮಗೆ ಇರಬೇಕು.

ಭಗವದ್ಗೀತೆಯ ಉಪದೇಶದ ಅನುಷ್ಠಾನದಲ್ಲಿ ಮೊದಲ ಹೆಜ್ಜೆಯೆಂದರೆ ನಮ್ಮೆಲ್ಲ ಕರ್ಮಗಳ ಫಲವನ್ನು ತ್ಯಾಗಮಾಡುವುದು ಮತ್ತು ನಮ್ಮೆಲ್ಲ ಕರ್ಮಗಳನ್ನೂ ಭಗವಂತನಿಗೆ ಸಮರ್ಪಿಸುವುದು. ಇದರ ಬಾಹ್ಯಲಕ್ಷಣಗಳೆಂದರೆ ಚಟುವಟಿಕೆಗಳ ಮಧ್ಯದಲ್ಲಿಯೇ ಸಮತ್ವ ಮತ್ತು ನಿರಾಸಕ್ತಿಯನ್ನು ಕಾಪಾಡಿಕೊಳ್ಳುವುದು. ತದನಂತರ, ಭಗವದ್ಗೀತೆಯು ಮಾನಸಿಕ ನಿಯಂತ್ರಣವನ್ನು ಉಪದೇಶಿಸುತ್ತದೆ. ಹಾಗೆಯೇ ಕರ್ಮಯೋಗವನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವ ಒಬ್ಬ ಗುರುವಿನ ಮಾರ್ಗದರ್ಶನದ ಮೂಲಕ ಅಭ್ಯಾಸಮಾಡಬೇಕು. ಅಂಥ ಮಹಾತ್ಮನನ್ನು ಪೂಜಿಸಬೇಕು ಮತ್ತು ಸೇವೆಮಾಡಬೇಕು. ಆತನನ್ನು ನಾವು ಅನುಸರಿಸಬೇಕಾದ ಆದರ್ಶದ ಪ್ರತಿಮೂರ್ತಿಯಾಗಿ ಪರಿಗಣಿಸಬೇಕು. ಇದು ನಮ್ಮನ್ನು ಭಕ್ತಿಯೋಗದೆಡೆಗೆ ಕರೆದುಕೊಂಡು ಹೋಗುತ್ತದೆ. ಭಕ್ತಿಯೋಗವೆಂದರೆ ಭಗವಂತನನ್ನು ಪ್ರೀತಿಸುವುದು ಮತ್ತು ಪ್ರತೀಕಗಳ ಮೂಲಕ ಪೂಜಿಸುವುದು. ಎಲ್ಲಕ್ಕಿಂತ ಶ್ರೇಷ್ಠವಾದ ಪ್ರತೀಕವೆಂದರೆ ಒಬ್ಬ ಜೀವನ್ಮುಕ್ತ, ಒಬ್ಬ ಮಹಾನ್ ಋಷಿ ಅಥವಾ ಒಬ್ಬ ಅವತಾರ. ಅವನನ್ನೇ ಸಾಧಕನು ತನ್ನ ಆದರ್ಶಪುರುಷನನ್ನಾಗಿ ಸ್ವೀಕರಿಸುತ್ತಾನೆ. ಬದುಕಿರುವ ಒಬ್ಬ ಆದರ್ಶವ್ಯಕ್ತಿಯು ಸಿಗದೆ ಹೋದರೆ, ಭಕ್ತಿಯನ್ನು ಅಪೂರ್ವ ಸೌಂದರ್ಯ, ವಿಭೂತಿ ಮತ್ತು ಉತ್ಕೃಷ್ಟತೆಗಳಿರುವ ಯಾವುದಾದರೂ ಒಂದು ಧ್ಯೇಯವಸ್ತುವಿನೆಡೆಗೆ ಹರಿಸಬೇಕಾಗುತ್ತದೆ. ಈ ಅಪೂರ್ವಗುಣಗಳು ನಮ್ಮ ಕಲ್ಪನೆಯನ್ನು ಉದ್ದೀಪನಗೊಳಿಸುತ್ತವೆ, ಉದಾತ್ತಗೊಳಿಸುತ್ತವೆ ಮತ್ತು ನಮ್ಮನ್ನು ನಿಸರ್ಗದ ಹಿನ್ನೆಲೆಯಲ್ಲಿರುವ ಸತ್ಯ, ಸೌಂದರ್ಯ ಮತ್ತು ಪವಿತ್ರತೆಗಳನ್ನು ಆರಾಧಿಸುವಂತೆ ಪ್ರೇರೇಪಿಸುತ್ತವೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಉನ್ನತವಾದ ಮಟ್ಟವನ್ನು ಏರಿದವನು ಪರಮಾತ್ಮನಿಗೆ ಸಮಾನನಾಗಿಯೇ ಇರುತ್ತಾನೆ. ಆದ್ದರಿಂದ ಅವನೇ ಒಬ್ಬ ಆರಾಧ್ಯಮೂರ್ತಿಯಾಗುತ್ತಾನೆ. ಹಾಗೆಂದು ಈ ಆರಾಧನಾ ಪ್ರತೀಕವೇ ಆತ್ಯಂತಿಕ ಸತ್ಯವೆಂದು ಪರಿಗಣಿಸಬಾರದು. ಈ ವಿಶ್ವದ ಆತ್ಯಂತಿಕ ಸತ್ಯವು ಕೇವಲ ಬಾಹ್ಯವಸ್ತುಗಳಲ್ಲಿ ಮಾತ್ರವೇ ಅಡಗಿಲ್ಲ. ಅದು ನಮ್ಮ ಹೃದಯಗಹ್ವರದಲ್ಲಿಯೇ ನಿಹಿತವಾಗಿದೆ. ಆದ್ದರಿಂದ ಭಗವತ್ತತ್ತ್ವವನ್ನು ನಮ್ಮ ಅಂತರಂಗದಲ್ಲಿಯೇ ನಾವು ಸಾಕ್ಷಾತ್ಕರಿಸಿಕೊಳ್ಳಬೇಕು.

ಭಗವದ್ಗೀತೆಯ ಕಡೆಯ ಆರು ಅಧ್ಯಾಯಗಳು, ಕ್ಷಣಿಕವಾದ ವಸ್ತುಗಳಿಂದ ನಿತ್ಯಸತ್ಯವನ್ನು ಪ್ರತ್ಯೇಕಿಸುವ ವಿಧಾನವನ್ನು ನಮಗೆ ಹೇಳಿಕೊಡುತ್ತವೆ. ಅಂದರೆ ನಿತ್ಯವಾದ ಆತ್ಮವನ್ನು ನಮ್ಮ ದೇಹೇಂದ್ರಿಯಗಳ ಒಕ್ಕೂಟದಿಂದ ಬೇರೆಗೊಳಿಸುವ ವಿಧಾನವನ್ನು ಉಪದೇಶಿಸುತ್ತವೆ. ಹೀಗೆ ಬಾಹ್ಯಜಗತ್ತಿನಲ್ಲಿ ಅನ್ವೇಷಿಸುತ್ತಿದ್ದ ಭಗವಂತನನ್ನು ನಾವು ಮಾನವಾತ್ಮನಲ್ಲಿಯೇ ಕಂಡುಕೊಳ್ಳುತ್ತೇವೆ. ಇದೇ ನಾವು ಭಕ್ತಿ ಮಾಡುವ ಮತ್ತು ಸಾಕ್ಷಾತ್ಕರದ ಧ್ಯೇಯವೆಂದು ಆರಾಧಿಸುವ ಭಗವಂತನ ಪರಿಶುದ್ಧರೂಪವಾಗಿದೆ ಎಂದು ನಮಗೆ ಆಗ ಅರಿವಾಗುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಕಟ್ಟಕಡೆಯ ಅಧ್ಯಾಯವು ಹೊಟ್ಟಿನಿಂದ ಧಾನ್ಯವನ್ನು ಪ್ರತ್ಯೇಕಿಸಿ ತೆಗೆದಂತೆ, ಜ್ಞಾನ ಅಥವಾ ಆತ್ಯಂತಿಕ ಸತ್ಯದ ಸಾಕ್ಷಾತ್ಕಾರವನ್ನೇ ಮುಖ್ಯವಾದ ಧ್ಯೇಯವನ್ನಾಗಿ ನಮಗೆ ಬೋಧಿಸುತ್ತದೆ. ಇದು ಹಿಂದಿನ ಆರು ಅಧ್ಯಾಯಗಳಲ್ಲಿ ಉಪದೇಶ ಮಾಡಿದ, ಭಕ್ತಿಯಿಂದ ಪರಿಶುದ್ಧವಾದ ಬುದ್ಧಿಯ ಕಾರ್ಯವೇ ಆಗಿದೆ; ಹಾಗೆಯೇ ಮೊದಲ ಆರು ಅಧ್ಯಾಯಗಳಲ್ಲಿ ಬೋಧಿಸಿದ ಕರ್ಮಯೋಗದ ಪ್ರಯೋಗವೇ ಆಗಿದೆ. ಆಧ್ಯಾತ್ಮಿಕ ಸಾಧನೆಯ ಸುಸಂಪನ್ನತೆಯೆಂದರೆ ಸಾಧಕನು ಎಲ್ಲೆಲ್ಲಿಯೂ ಭಗವಂತನನ್ನು ಕಾಣುವಂಥ ಉನ್ನತ ಸ್ಥಿತಿಯನ್ನು ಪಡೆದುಕೊಳ್ಳುವುದು; ಹಾಗೂ ಎಲ್ಲವನ್ನೂ ತನ್ನ ಆತ್ಮನಲ್ಲಿಯೇ ಪರಿಭಾವಿಸುವ ಪರಿಪೂರ್ಣಸ್ಥಿತಿಯನ್ನು ಹೊಂದುವುದು. ಆಗ ಮಾತ್ರವೇ ಸಮದೃಷ್ಟಿಯಿಂದ ಒಬ್ಬನು ಎಲ್ಲರನ್ನೂ ಪ್ರೀತಿಸಲು ಸಾಧ್ಯವಾಗು

## ಶ್ರೀಚೈತನ್ಯರ ಪರೀಕ್ಷೆ

ಶ್ರೀ ಚೈತನ್ಯರು ಕೇಶವ ಭಾರತಿಗಳ ಬಳಿಗೆ ಸಂನ್ಯಾಸ ದೀಕ್ಷೆಗಾಗಿ ಹೋದಾಗ ಅವರು, ''ನೀನಿನ್ನೂ ತಾರುಣ್ಯದಲ್ಲಿರುವೆ; ಅಂತೆಯೇ ಎಣೆಯಿಲ್ಲದ ಸುಕುಮಾರನಾಗಿರುವೆ. ನಿನಗೆ ಸಂನ್ಯಾಸ ದೀಕ್ಷೆ ಕೊಡಲು ಯಾರಿಗೆ ಧೈರ್ಯ ಬರುವುದು?'' ಎಂದರು. ಶ್ರೀಚೈತನ್ಯರು,''ಸಾಧಾರಣವಾಗಿ ನೀವು ಯಾರಿಗೆ ಸಂನ್ಯಾಸ ದೀಕ್ಷೆ ಕೊಡಬೇಕಾದರೂ ಮೊದಲು ಅವರನ್ನು ಪರೀಕ್ಷಿಸುವಿರಲ್ಲವೆ? ನಾನು ಅದಕ್ಕೆ ಅರ್ಹನಾಗಿದ್ದರೆ ನನಗೆ ದೀಕ್ಷೆ ಕೊಡಲು ನೀವು ಸಹಜವಾಗಿಯೇ ಇಷ್ಟಪಡುವಿರಿ. ಆದ್ದರಿಂದ ದಯವಿಟ್ಟು ನನ್ನನ್ನು ಪರೀಕ್ಷಿಸಿ. ನಾನು ಅರ್ಹನೋ ಅಲ್ಲವೋ ನೋಡಿ'' ಎಂದರು. ಭಾರತಿಗಳು ಶ್ರೀಚೈತನ್ಯರಿಗೆ ''ನಿನ್ನ ನಾಲಿಗೆಯನ್ನು ನೀಡು'' ಎಂದರು. ಅವರು ನೀಡಿದಾಗ ಗುರು ಕೊಂಚ ಸಕ್ಕರೆಯನ್ನು ಅವರ ನಾಲಿಗೆಯ ಮೇಲೆ ಹಾಕಿದರು. ಸಕ್ಕರೆ ಮೊದಲಿದ್ದ ಹಾಗೆಯೆ ಇತ್ತು, ಕೊಂಚವೂ ನೀರಾಗಲಿಲ್ಲ. ಅದನ್ನು ಊದಿದ ಕೂಡಲೆ ಗಾಳಿಗೆ ಹಾರಿ ಹೋಯಿತು. ಇನ್ನು ಕಾಮಪ್ರವೃತ್ತಿಯನ್ನು ಪರೀಕ್ಷಿಸುವ ಆವಶ್ಯಕತೆ ಇರಲಿಲ್ಲ.